ಮಾಡಿದಿರಿ ಅಂತಲೇ ಅವೊತ್ತು ನಾನು ಸೆಮಿನಾರ್‌ನಲ್ಲಿ ಯಶಸ್ವಿಯಾಗೋದಕ್ಕೆ ಕಾರಣವಾಯ್ತು. ಅಷ್ಟೇ ಅಲ್ಲ, ಅವೊತ್ತಿನಿಂದ, ಕಾಲೇಜು ಬಿಡೋವರೆಗೂ ನಾನು ಕಷ್ಟ ಅನುಭವಿಸಿದಾಗಲೆಲ್ಲ ನೀವು ನನಗೆ ಮಾಡಿದ ಸಹಾಯ ಒಂದು ತರಹದ್ದಲ್ಲ. ಆದರೆ ಅದೆಲ್ಲ ಕಳೆದು ಮೂರು ವರ್ಷ ಆಗ್ಹೋಯ್ತಲ್ಲ.'

'ಅಂದ್ರೆ ಹಳೇದಾದ ಕೂಡಲೇ ಎಲ್ಲ ಮಾಸಿ ಹೋಗಿಬಿಡಬೇಕು, ಅಂತಲೇ?'

ಕಣ್ಣಂಚಿನಲ್ಲಿ ಮುತ್ತಾಗಿದ್ದ ನೀರು ನೆಲಕ್ಕೆ ಉರುಳುವ ಮೊದಲೇ ಮಧು ಕರ್ಚೀಫಿನಿಂದ ಅದನ್ನು ಒರೆಸಿಕೊಂಡಳು. ಇದುವರೆಗೂ ಖಾಲಿಯಿದ್ದ ಲೌಂಜ್‌ನಲ್ಲಿ ಈಗ ಇಬ್ಬರು– ಪ್ರವಾಸಿಗರಂತೆ ತೋರುತ್ತಿದ್ದವರು– ಕಾಣಿಸಿಕೊಂಡರು. ಆತನಿಗಿಂತ ಆಕೆಯೇ ಹೆಚ್ಚು ವಯಸ್ಸಾದವಳಂತೆ ಕಾಣುತ್ತಿದ್ದರು.

ನಾನು ಮಾತು ನಿಲ್ಲಿಸಿದರೂ, ಮಧು ಏನನ್ನೂ ಹೇಳದಿದ್ದದ್ದರಿಂದ, ಮುಂದುವರಿಸಿದೆ– 'ನಿಜ, ಮಧು, ಮೂರೂ ವರ್ಷಾನೂ ಆಗಿರೋದರ ಜತೆಗೆ, ಡಿಗ್ರಿ ತಗೊಂಡು, ನಾನು ನನ್ನ ದಾರಿ ನೀನು ನಿನ್ನ ದಾರಿ ಹಿಡಿಯೋದಾಗಿದ್ದರೆ, ಅದರ ವಿಷಯಾನೇ ಬೇರೆ ಆಗಿರುತ್ತಿತ್ತು. ಆದರೆ ಅವೊತ್ತಿನಿಂದಲೇ ನೀನು, ನನ್ನ ಮೇಲೆ ನಿನ್ನ ವರ್ಚಸ್ಸನ್ನ ಬೀರಿದೀಯ, ಅಲ್ಲದೆ ನಾವಿಬ್ಬರೂ ಒಂದೇ ಸಂಸ್ಥೆಯಲ್ಲಿ ದುಡೀತಿದೀವಿ. ದಿನವೂ ಒಬ್ಬರನ್ನೊಬ್ಬರು ನೋಡಲೇಬೇಕು.'

**'ರೇಖಾ ಬಹಳ ಮುಗ್ಧ ಹುಡುಗಿ, ಅಮ್ಮ ಗದರಿಸಿ ಒಂದು ಮಾತು ಹೇಳಿದರೆ, ಒಪ್ಪಿಕೊಂಡುಬಿಡುತ್ತಾಳೆ. ಈಗ ಹದಿನೈದು ದಿನದಲ್ಲಿ ಹೋಗಿದ್ದಾಗ ಏನಾಯ್ತು ಅಂತ ನಿಮಗೆ ಹೇಳಿದ್ದೆನಲ್ಲ. ಹುಡುಗ ಎಲ್ಲ ಸರಿ, ಆದರೆ ಎಡಗಾಲು ಮಾತ್ರ ಸ್ವಲ್ಪ ತಿರುಚಿದೆ ಅಂತೆಲ್ಲ ಹೇಳ್ತಾ ಇದ್ದಳು ಅಮ್ಮ. ಕೊನೆಗೆ ಕೆಲಸ ಏನೂ ಅಂದರೆ, ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಸೆಕೆಂಡ್ ಡಿವಿಜನ್ ಕ್ಲಾರ್ಕ್ ಅಂತೆ. ಅಂತಹ ಸೌಭಾಗ್ಯಕ್ಕೆ ರೇಖಾನ ಅವನಿಗೆ ಯಾಕೆ ಕೊಡಬೇಕು?'**

ಮಧು ಈಗ ತೀಕ್ಷ್ಣವಾಗಿ ಅನುಭವಿಸಿ, ಹೇಳಿದಳು–

'ಇನ್ನೊಬ್ಬರ ಮೂರ್ಖತನ ಗೊತ್ತಾಗುವಷ್ಟು ಬೇಗ, ನಮ್ಮ ಮೂರ್ಖತನ ತಿಳಿಯೋದಿಲ್ಲ.'

'ಅಂದರೆ?'

'ಅಂದರೆ ಏನ್ ಬಂತು? ಇದ್ಯಾವುದೂ ಇಲ್ಲದೆ ನಮ್ಮ ಸ್ನೇಹ–ಸ್ನೇಹವಾಗಿ ನಿಲ್ಲಲಾರದೇನು? ನನಗೇನೋ ಆನಂದ್ ಅನ್ನೋ ಒಬ್ಬ ವ್ಯಕ್ತಿ ಇದಾನೆ, ಅನಿಸೋದೇ ಇಲ್ಲ. ನಾನು ನನ್ನ ಪಾಡಿಗೆ ಹೇಗೆ ನನ್ನ ಅಸ್ತಿತ್ವ ತಪ್ಪಿಸಿಕೊಳ್ಳಲಾರದೆ ಇದ್ದೇನೋ, ನಿಮ್ಮ ಅಸ್ತಿತ್ವನೂ ಹಾಗೇ ಅನಿಸಿದೆ.'

'ಆದ್ದರಿಂದಲೇ ನಿನಗೆ ಮದುವೆ ಅನ್ನೋ ಮಾತು ಕೇಳಿದರೆ, ಅಷ್ಟೊಂದು ಕೋಪ ಬರೋದು, ಅಲ್ಲವೆ?'

'ಅದು ನನ್ನ ವೈಯಕ್ತಿಕ ಅನುಭವ. ಆದರೆ ಈ ಅಮ್ಮನಿಗೆ ನಾನು ಹೇಳೋದು ಪ್ರತಿಯೊಂದೂ